Rega No BG 155

Sri "SATYAVADI"
— DAILY —
MYSORE 4
46 th Year

Protect the cow

— ಶ್ರೀ —

ಸತ್ಯವಾದಿ
SATYAVADI

ಸ್ಥಾಪಕರು— ಅರಮನೆ ಸಿಂಸ್ಕೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈಸೆ

10—2—1962

ಪ್ರಮುಖ ವರ್ತಮಾನಗಳಿಗೆ
ಅತರ್ಕಣೀಯ ಲೇಖನಗಳಿಗೆ
" ಸತ್ಯ ವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ದೇವರ ಪಕ್ಷ

ಆಂಧ್ರ ಪ್ರದೇಶದ ಅನಂತಪುರದಲ್ಲಿ ಶ್ರೀ ವೇದಾಂತಂ ಲಕ್ಷ್ಮಣಯ್ಯ ಎಂಬ ಸಂಸ್ಕೃತ ಪಂಡಿತರು ಇದ್ದಾರೆ ಅವರೇ ಇರುವ ಪಕ್ಷ ಸ್ಥಾಪಿಸಿರುವರು ಅದಂ ಹೆಸರು ದೇವಂ ಸ್ವಂತ ಪಾರ್ಟಿ. ಈ ಪಕ್ಷಕ್ಕೆ ಚುನಾವಣೆ ಕ ಏಾಷ್ಟ ಮನ್ನಣೆ ಕೊಡಲಿಲ್ಲ ಆದರೆ ಲಕ್ಷ್ಮಣಯ್ಯನವರು ಅದಕ್ಕೆ ಗಮನಕೊಡ ಲಿಲ್ಲ ಕಳೆದ ಚುನಾವಣೆಯಲ್ಲಿ ಅವರು ಲೋಕಸಭೆಗೆ ಸ್ಪರ್ಧಿಸಿ 7 ಸಾವಿರ ಮತ ಗಳನ್ನು ಪಡೆದು ಠೇವಣಿ ಕಳೆದುಕೊಂ ಡರು ಈ ಬಾರಿ ಕೂಡ ಅವರು ಸ್ಪರ್ಧಿ ಸಿದ್ದಾರೆ. ಅವರು ಸಭೆಗಳಿಗೆ ಭಾರಿ ಜನ ಸೇರುತ್ತಿದ್ದಾರೆ.

ಮುಷ್ಕರ

ಖಾಸಗಿ ಕ್ಷೇತ್ರದಲ್ಲಿ ಅವಧಿ ಲೈಸ ನ್ಸನ್ನು ಸರ್ಕಾರ ರದ್ದುಮಾಡುವ ನೀತಿ ಯನ್ನು ಪ್ರತಿಭಟಿಸಿ ರಂಗೂನಿನ 9 ವಾ ಣಿಜ್ಯ ಸಂಸ್ಥೆಗಳು ಬರುವ ಮಂಗಳವಾರ ದಿಂದ ಮುಷ್ಕರಿಸುವುವು

ಮಾರ್ಚಿಯಲ್ಲಿ ಸಭೆ

ಸಾರ್ವತ್ರಿಕ ಚುನಾವಣೆಯ ಫಲಿ ತಾಂಶ ಪರಿಶೀಲಿಸಲು ಮಾರ್ಚಿ ಮೊದ ಲನೆ ವಾರ ಕಾಂಗ್ರೆಸು ಪಾರ್ಲಿಮೆಂಟರಿ ಸಮಿತಿ ನವದೆಹಲಿಯಲ್ಲಿ ಸಮಾವೇಶ ಆ ಗುವದು

ನಾಸೂರು ಮಂದಿಯ ಉಚ್ಚಾಟನೆ

ಅಧಿಕೃತ ಅಭ್ಯರ್ಥಿಗಳ ವಿರುದ್ಧ ಚು ನಾವಣೆ ವಾರಕೆ ವಾಪಸು ಪಡೆಯದಿದ್ದ ನಾಸೂರು ಕಾಂಗ್ರೆಸಿಗರನ್ನು ಪಕ್ಷದಿಂದ ತೆಗೆದಿದೆ ಎಂದು ನವದೆಹಲಿ ವಾರ್ತೆ. ಇವರೆಲ್ಲರೂ ವಿಧಾನ ಸಭೆ ಸ್ಪರ್ಧಿಗಳು

ಇನ್ನೂರು ಮಂದಿಯ ಬಂಧನ

ಡಾಕ್ಕಾದಲ್ಲಿ ಪರಿಸ್ಥಿತಿ ಹತೋಟಿ ಯಲ್ಲಿದೆ ಇನ್ನೂರು ವಿದ್ಯಾರ್ಥಿಗಳ ಬಂಧನವಾಗಿದೆ.

ಉಪವಾಸ

ವಿಧಾನಸಭೆ ಹಾಗೂ ಪಾರ್ಲಿಮೆಂ ಟಿಗೆ ಹರಿಜನ ಕ್ರಿಶ್ಚಿಯನ್ನರಿಗೆ ಸೂಕ್ತ ಪ್ರಾತಿನಿಧ್ಯ ಕೊಡಲಿಲ್ಲವೆಂದು ನಂಪಾ ಪೇಟೆಯ ಹರಿಜನ ಕ್ರಿಶ್ಚಿಯನ್ ನಾಯಕ ಡಾ|| ಜೆರ್ರಾ ಆನಂದರು ಉಪವಾಸ ಆ ರಂಭಿಸಿರುವರೆಂದು ಗಂಟೂರಿನ ವಾರ್ತೆ

ಕಡಿಮೆ ಮಟ್ಟ

ಮೈಸೂರಿಗೆ ಸೇರಿದ ಪ-ಪ್ರದೇಶಗಳ ವಿ ದ್ಯಾರ್ಥಿಗಳ ಮಟ್ಟಕ್ಕಿಂತ ಹಳೆ ಮೈಸೂ ರಿನ ವಿದ್ಯಾರ್ಥಿಗಳ ಮಟ್ಟ ಕಡಿಮೆ ಇದೆ ಎಂದು ಡಿ ಡಿ ಪಿ ಐ ಶ್ರೀರಂಗರಾಜ್ ನಂಜನಗೂಡಿನಲ್ಲಿ ತಿಳಿಸಿದರು

ಸತ್ಯಾಗ್ರಹ

ಜನಪ್ರಿಯವಾಗಿ ' ಗೋರಾ ' ಎಂಬ ಹೆಸರು ಗಳಿಸಿರುವ ಶ್ರೀ ಗೋಪಾಲಾಚಾರಿ ರಾವ್ ಚಂದ ರಾಯರು ಹೈದಾಬಾದಿನಲ್ಲಿ ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತ ಪಕ್ಷರಹಿತ ಪ್ರಜಾಪ್ರಭುತ್ವ ಸ್ಥಾಪನೆ ಗೋಸ್ಕರ ಪಾರ್ಲಿಮೆಂಟು ಮತ್ತು ಶಾ ಸನ ಸಭೆಗಳ ಅಧಿವೇಶನಗಳ ಮುಂದೆ ಸತ್ಯಾಗ್ರಹ ಆಚರಿಸುವದಾಗಿ ತಿಳಿಸಿದರು

ಧೂಮಕೇತು ಪತ್ತೆ

ಹೊಸ ಧೂಮಕೇತುವನ್ನು ಟೋ ಕಿಯೋ ಖಗೋಳ ಅಬ್ಸರ್ವೇಟರಿ ಪತ್ತೆ ಮಾಡಿದೆ

ಪೂರ್ಣಾಹುತಿ

ಮೈಸೂರು ಅಶೋಕರೋಡ್ ಕಾಶ್ರಿ ಸ್ವಾನ ಜಿಜ್ಞಾತೀರ್ಥಂದಿರಂ ಅವರಣದಲ್ಲಿ ನವಗ್ರಹ ಮಹಾಯಾಗದ ಪೂರ್ಣಾಹುತಿ ಶ್ರೀ ಶೃಂಗೇರಿ ಜಗದ್ಗುರುಗಳವರ ದಿವ್ಯ ಸಮ್ಮುಖದಲ್ಲಿ ನಿನ್ನೆ ಮಧ್ಯಾಹ್ನ ನೆರವೇ ರಿತು.

oo

ಫ್ರೆಂಚು ಭಾಷೆಯು ಎಂ ಎ ಆರಂಭಿ ಸಲು ಮದ್ರಾಸು ವಿಶ್ವವಿದ್ಯಾನಿಲಯ ಯೋಚಿಸುತ್ತಿದೆ.

ಬಂದಿಗಳ ಓಟ

ಪಶ್ಚಿಮ ಜರ್ಮನಿಯ ಪಾಲ್ಪ ಜೈಲಿ ನಿಂದ 73 ಖೈದಿಗಳು ಪರಾರಿಯಾದರು

ರಾಜಾಜಿ ನುಡಿ

ಪಂ|| ನೆಹರು ಮತ್ತು ಅವರ ಯೋ ಜನಾ ಸಮಿತಿ ದೇಶವನ್ನು ಕಮ್ಯೂನಿಸಂ ಉಳುಮೆಗೆ ಅವಕಾಶ ಮಾಡುತ್ತಿದೆ ಎಂದು ರಾಜಾಜಿ ಬೊಂಬಾಯಿನಲ್ಲಿ ತಿಳಿ ಸಿದರು

ಸಭೆಯಲ್ಲಿ ಗೊಂದಲ

ಬುಧವಾರ ರಾತ್ರಿ ಬೆಟಗೇರಿಯಲ್ಲಿ ಮುಖ್ಯ ಮಂತ್ರಿ ಶ್ರೀ ಬಿ ಡಿ ಜತ್ತಿಯು ವರು ಚುನಾವಣೆ ಭಾಷಣ ಮಾಡಲಿ ದ್ದಾಗ ಪಾದರಕ್ಷೆ ಮತ್ತು ಕಲ್ಲುಗಳು ಬಿ ದ್ದವು ಸಭೆ ಗೊಂದಲದಲ್ಲಿ ಮುಗಿ ಯಿತು

ಹೃದ್ರೋಗಿಗಳಿಗೆ

ಕಾನ್ಪುರದಲ್ಲಿ ಡಾ|| ವಾಲ್ ಡ ಡ್ಡಿ ವೈಟ್‌ಗರು ಮಾತನಾಡುತ್ತಾ, ಹೃದ್ರೋ ಗಸ್ಥರು ಒಳ್ಳೆಯ ಹೆಂಡತಿಯನ್ನು ಮತ್ತು ಒಳ್ಳೆಯ ಆಡಿಗೆಯವಳಾಗಿರುವಳನ್ನು ವಿವಾಹವಾಗಬಾರದು ಎಂದು ಸಲಹೆ ಮಾಡಿದರು.

★

ಆಚಾರ್ಯ ಕೃಪಾಲಿನಿ ಪರವಾಗಿ ಬೊಂಬಾಯಿ ಉತ್ತರ ಕ್ಷೇತ್ರದಲ್ಲಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಭಾಷಣಮಾಡುತ್ತಾ, ಶ್ರೀ ಎ ಕೆ ಕೃಷ್ಣ ಮೆನನ್‌ರನ್ನು ಚುನಾಯಿಸಿ ಅವಾಯಕ್ಕೆ ಅವಕಾಶ ಮಾಡಬಾರದೆಂದು, ಬೇಡದ ವ್ಯಕ್ತಿಯನು ರಾಷ್ಟ್ರದ ವೇಲೆ ಹೇರ ಕೂಡದೆಂದು ತಿಳಿಸಿದರು

ರಾಜಮಹಲ ಥಾಣಾದ ಮಂಗಲಭಟ ಕ್ಷೇತ್ರದಲ್ಲಿ ಕಾಂಗ್ರೆಸು ಮತ್ತು ಸ್ವತಂತ್ರ ಪಕ್ಷದ ಬೆಂಬಲಿಗರಲ್ಲಿ ಹೊಡೆದಾ ಟವಾಗಿ 12 ಮಂದಿ ಗಾಯಗೊಂಡರೆಂ ಬುದಾಗಿ ಸಾಹಿಬ್‌ಗಂಜ್‌ನಿಂದ ವಾರ್ತೆ ಬಂದಿದೆ.

ವಿವಿಧ ವಿಷಯಗಳು

ಮೈಸೂರು : ರಾಜ್ಯದ ಜೆ ಸಿ ಎ ಎಂ ವಿದ್ಯಾರ್ಥಿಗಳು ಮುಷ್ಕರ ಹೂಡಿ ಮೂವತ್ತು ದಿವಸಗಳು ಕಳೆದವು.

ಪಶ್ಚಿಮ ಇರಿಯರ್ ಪ್ರಾಂತ್ಯದ ವಶದಲ್ಲಿ ರುವದು ವಿಶ್ವಸಂಸ್ಥೆ ಪ್ರಣಾಳಿಕೆಗೆ ವಿ ರೋಧ ಎಂದು ಇಂಡೋನೇಷ್ಯ ತಿಳಿಸಿದೆ.

ಕಾಶ್ಮೀರಾಗಾಗಲಿ ಸಶಸ್ತ್ರ ಚಟುವ ಟಿಕೆಯು ದಿನೆದಿನೆಯಿಂದ ಮಂಡಿವುಂಡ ವಿದು ನೆಗ್ರಾಂಗಿನಲ್ಲಿ ಸಂಜೆಯಿಂದ ಬೆಳಗಿನ ವರಿಗೆ 2 ತಿಂಗಳು ವರಿಗೆ ಕರ್ಫ್ಯೂ ವಿಧಿಸಿದೆ

ಅಣು ಪರೀಕ್ಷೆ ನಿಷೇಧ ಸಂಬಂಧಿಸಿ ದಂತೆ ಇಷ್ಟರೊಡನೆ ವಿದೇಶ ಮಂತ್ರಿಗಳ ಸಮ್ಮೇಳನ ನಡೆಯಬೇಕೆಂದು ಲಂಡನ್ ರಾಡಿಯೊ ವಾಷಿಂಗ್ಟನ್ನಿನಲ್ಲಿ ಪ್ರಕಟವಾ ಗಿದೆ.

ಪೂರ್ವಿನ ಬಾಲ್ಕನ್ ಪ್ರದೇಶದ ಕದನ ವಿರಾಮ ಗೆರೆಯುತ್ತ ಪಾಕಿಸ್ತಾನಿ ಸೇನೆಗಳು ಗುಂಡುಹಾರಿಸಿದವೆಂದು ಜಮ್ಮುವಿಗೆ ವಾರ್ತೆಬಂದಿದೆ

ಭೂಪಾಲಿನ ಭಾರಿ ವಿದ್ಯುತ್ ಸಂಸ್ಥೆ ಪ್ರದೇಶದಲ್ಲಿ ಬಹಿರಂಗ ಭಾಷಣ ಮಾಡಲು ಅಗಮಿಸಿದ ಭಾರತ ಗೃಹ ಮಂತ್ರಿ ಶ್ರೀ ಲಾಲ ಬಹದ್ದೂರ ಶಾಸ್ತ್ರಿಯವರು ಬರಲು ಆಡಳಿತ ವಿರೋಧ ಘೋಷಣೆಗಳು ಆದವು

ಅವಕಾಶ ಹಾಗೂ ಅರ್ಹತೆಯ ಪರೀಕ್ಷೆ ಇಲ್ಲದೆ ನಿಮ್ನ ವರ್ಗ ಹಾಗೂ ಗುಡ್ಡಗಾಡು ಜನರಿಗೆ ವೈದ್ಯಕೀ ಅದನಂತರ ವಿದ್ಯಾರ್ಥಿವೇತನ ಕೊಡಬೇಕೆಂದು ಕೇಂದ್ರ ಸರ್ಕಾರ ನಿರ್ಧರಿಸಿದೆ

ವ್ಯವಸಾಯ ಪ್ರದರ್ಶನವನ್ನು ಖಾಯಮ್ಮಾಗಿ ಕೊಂಡಿರಲು ಮದ್ರಾಸು ಸರ್ಕಾರ ನಿರ್ಧರಿಸಿದೆ.

ಹರಿದ್ವಾರ್ ಜಿಲ್ಲೆಯ ಸಾಂಡಿಲಾ ಥೇಸಿಲಿನ ಕಾಂಗ್ರೆಸು ಹಾಗೂ ಜನಸಂಘ ಕಾರ್ಯಕರ್ತರಲ್ಲಿ ಹೊಡೆದಾಟವಾಗಿ ೫ ವ ರಿ ಮರಣಹೊಂದಿದರು.

ನಾಳೆಯ ಪಂಚಾಂಗ

ಅಸ್ಮಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ

11 ಸಪ್ತಮಿ ಭರಣಿ

ನೆಹರು ಉತ್ತರ

ಕೊಯ್ಮುತ್ತೂರಿನಿಂದ ನವ ದೆಹಲಿಗೆ ಹೋಗುವ ಮುನ್ನ ಪಂ| ನೆಹರು ಪತ್ರಿಕೆಯವರೊಡನೆ ಮಾತನಾಡುತ್ತಾ ನಾನು ರಾಜಾಜಿಯವರ ಅಭಿಪ್ರಾಯ ನೋಡಿದೆ, ಬಡತನ ಹಾಗೂ ನಿರುದ್ಯೋಗವನ್ನು ಯಾವ ರೀತಿ ಪರಿಹರಿಸಬೇಕೆಂಬುದು ಅದರಲ್ಲಿ ಇಲ್ಲ ಎಂದರು.

೦ ೦

ಸ್ಥಾನಬದ್ಧ ಶಾಸನದ ಪ್ರಕಾರ ಬಂಧಿತರಾದ ಪಾಕಿಸ್ತಾನದ ಮಾಜಿ ಪ್ರಧಾನಿ ಸಹ್ರಾವರ್ದಿಯವರ ವಿಚಾರಣೆ ನಡೆಯಬೇಕೆಂದು ಪಶ್ಚಿಮ ಪಾಕಿಸ್ತಾನದ ಪಕ್ಷಿಲ ಸಂಘ ನಿರ್ಧರಿಸಿದೆ

ಸ್ವತಂತ್ರ ಪಕ್ಷದ ಸಭೆ

ಮೈಸೂರು 9 — ಮೈಸೂರು ನಗರ ಮತ್ತು ಜಿಲ್ಲ ಸ್ವತಂತ್ರ ಪಕ್ಷದ ಆಶ್ರಯದಲ್ಲಿ ನಿನ್ನೆ ಸಂಜೆ ಸ್ವತಂತ್ರ ಪಕ್ಷದ ಲೋಕಸಭೆ ಉಮೇದುವಾರರಾದ ಶ್ರೀ ಎಚ್. ರಾಮರಾಜ ಅರಸುರವರ ಅಧ್ಯಕ್ಷತೆಯಲ್ಲಿ ಪುರಭವನದ ಆವರಣದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಶ್ರೀಗಳಾದ ಬಿ ವಿ ನಾರಾಯಣರೆಡ್ಡಿ, ಕೆ. ಹೆಚ್ ಶ್ರೀನಿವಾಸ್ ಮತ್ತು ಡಾ|| ಡಿ ವಿ ಗುಂಡಪ್ಪನವರು ಭಾಷಣಮಾಡಿ ಸ್ವತಂತ್ರ ಪಕ್ಷಕ್ಕೆ ಓಟು ಕೊಡಬೇಕೆಂದು ನುಡಿದರು. ಸ್ವತಂತ್ರ ಪಕ್ಷದ ಮೈಸೂರು ನಗರ ಮತ್ತು ಜಿಲ್ಲ ಸಮಿತಿ ಅಧ್ಯಕ್ಷರಾದ ಶ್ರೀ ಹೆಚ್. ನಿರಂಜನರಾಜ ಅರಸುರವರು ಸ್ವಾಗತ ಭಾಷಣ ಮಾಡಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಹೆಚ್. ಎಸ್. ಚಂದ್ರಶೇಖರ್‌ರವರು ವಂದನಾರ್ಪಣೆ ಮಾಡಿದರು.

ಶ್ರೀ ದೈವಿಕ ಆಶ್ರಮಂ

1431 ಸೊಪ್ಪಿನಕೊಳವ ಬೀದಿ, ಮೈಸೂರು 4

ಶ್ರೀ ದೈವಿಕ ಆಶ್ರಮದ ಶ್ರೀ ಶ್ರೀ ಸ್ವಾಮಿ ಶ್ರೀ ಕೃಷ್ಣ ಚೈತನ್ಯರವರು, ಅಷ್ಟಗ್ರಹ ಕೂಟದ ದೋಷ ಪರಿಹಾರಾರ್ಥವಾಗಿ, ನಿಮ್ಮೆಲ್ಲರ ಕಲ್ಯಾಣಕ್ಕೂ, ಮತ್ತು ದೇಶದ ಶಾಂತಿಗೂ ಪರೋಪಕಾರಬುದ್ಧಿಯಿಂದ ಅನುಗ್ರಹ ನೀಡಿದ್ದಾರೆ.

ಅಪರೂ ಈ ವರ್ಷ ಪವಿತ್ರ ಮಹಾಶಾಂತಿ ಸಮಾರಂಭಗಳನ್ನು ಮೂರು ಸಾರಿ ನಡೆಸಿ, ಲೋಕ ರಕ್ಷಣೆಗಾಗಿ ಭಗವಂತನಲ್ಲಿ ಪ್ರಾರ್ಥನೆ ಸಲ್ಲಿಸಿದ್ದಾರೆ.

ಶ್ರೀ ಆಶ್ರಮದಲ್ಲಿ ಜಾಗರೂಕತೆಯಿಂದ ಸಕಾಲಗಳಲ್ಲಿ ಶಾಂತಿ ಪೂಜೆಗಳು ಮತ್ತು ಪ್ರಾರ್ಥನೆಗಳನ್ನು ನಡೆಸಲಾಗಿರುವುದರಿಂದ, ನಿಮ್ಮ ವೇಲಿ ಅಷ್ಟೇನೂ ಕೆಟ್ಟ ಪರಿಣಾಮ ಉಂಟಾಗಲಾರದೆಂದು ಅವರು ಭರವಸೆ ನೀಡುತ್ತಾರೆ.

ಪವಿತ್ರ ಪ್ರಸಾದವು ಭಕ್ತರಿಗೆ ಕೊಡಲಾಗುವುದು ಅಥವಾ ಕಳುಹಿಸಲಾಗುವುದು

ಮೈಸೂರುನಗರ (ದಕ್ಷಿಣ) ಕ್ಷೇತ್ರದಿಂದ ವಿಧಾನಸಭೆ ಚುನಾವಣೆ

— 25-2-62 —

ನಿಮ್ಮ ಪವಿತ್ರವಾದ ಓಟನ್ನು ಸ್ವತಂತ್ರ ಪಕ್ಷದ

ಡಾ|| ಎನ್. ಎಸ್. ನಾರಾಯಣರಾವ್

ಅವರಿಗೆ ಕೊಡಬೇಕಾಗಿ ವಿನಂತಿ — ಅವರ ಸೀರಿಯಲ್ ನಂ 3

ಅವರ ಗುರುತು ನಕ್ಷತ್ರದ ಮುಂದೆ

ನ ಕ್ಷ ತ್ರ X ಹೀಗೆ ಸೀಲ್ ಹಾಕಿ

Edited, Printed & Published by the Proprietor, Dharma Prachara Niyata M. S. Krishna Rao, at the Satyavadi Press Chamarajapuram, Mysore 4.

ವುಡ್‌ಲಾಂಡ್ 9-2-62 ರಿಂದ
ಶಿ ನ ಅಮೋಘ ಆರಂಭ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್
ಸಂಗೀತ- ಶಂಕರ್-ಜೈಕಿಶನ್ [ದಿನವಹಿ 4 ಪ್ರದರ್ಶನಗಳು]

ಆಪೆರಾ ಜಯಪ್ರದ 2 ನೇ ವಾರ

ಭೂಕೈಲಾಸ (ಕನ್ನಡ)

ತಾರಾಗಣ— ರಾಜಕುಮಾರ್, ಜಮುನ, ಇ ವಿ ಸರೋಜ, ರಂಗರಾವ್
ಕಮಲಾ ಲಕ್ಷ್ಮಣ್, ಗೋಪಿ ಕೃಷ್ಣ [ದಿನವಹಿ 3 ಆಟಗಳು]

SHAKTI SUDHA

★

A Superb Tonic

Help ' The Gorakshana '

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

— — Malaria Fighters —